# ಕರ್ನಾಟಕ ವಿಶ್ವವಿದ್ಯಾಲಯ

# ಧಾರವಾಡ

## ದಿನಾಂಕ 25–03–2017 ರಂದು ಜರುಗಿದ
## ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯ ನಡುವಳಿಗಳು

*****

Scanned with Oken Scanner

| | | | |
|---|---|---|---|
| 14. | ಸ್ನಾತಕ ಪದವಿಯಲ್ಲಿ ಸಂಸ್ಕೃತ ಅಧ್ಯಯನ ಮಾಡಲು ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿರುವುದರಿಂದ, ಕೇವಲ ಓರ್ವ ವಿದ್ಯಾರ್ಥಿ ಸಂಸ್ಕೃತ ವಿಷಯವನ್ನು ಆಯ್ಕೆ ಮಾಡಿಕೊಂಡರೂ ಅವಕಾಶವನ್ನು ಕಲ್ಪಿಸಿಕೊಟ್ಟು, ಕನಿಷ್ಠ ವಿದ್ಯಾರ್ಥಿಗಳ ಸಂಖ್ಯಾಮಿತಿಯಿಂದ ವಿನಾಯಿತಿ ನೀಡಲು ಕಲಾ ನಿಖಾಯ ಸಭೆಯ ಮಾಡಿರುವ ಶಿಫಾರಸ್ಸನ್ನು ಪರಿಶೀಲಿಸುವ ಕುರಿತು. | Academic (S&T) | ಸ್ನಾತಕ ಪದವಿಯಲ್ಲಿ ಸಂಸ್ಕೃತ ಅಧ್ಯಯನ ಮಾಡಲು ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿರುವುದರಿಂದ, ಕೇವಲ ಓರ್ವ ವಿದ್ಯಾರ್ಥಿ ಸಂಸ್ಕೃತ ವಿಷಯವನ್ನು ಆಯ್ಕೆ ಮಾಡಿಕೊಂಡರೂ ಸಹಿತ ಅವರಿಗೆ ಪ್ರವೇಶಾವಕಾಶವನ್ನು ಕಲ್ಪಿಸಿಕೊಟ್ಟು, ಕನಿಷ್ಠ ವಿದ್ಯಾರ್ಥಿಗಳ ಸಂಖ್ಯಾಮಿತಿಯಿಂದ ವಿನಾಯಿತಿ ನೀಡಲು ಅನುಮೋದಿಸಿದ ಕಲಾ ನಿಖಾಯದ ಶಿಫಾರಸ್ಸನ್ನು ವಿದ್ಯಾವಿಷಯಕ್ ಪರಿಷತ್‌ದಲ್ಲಿ ಸುಧೀರ್ಘವಾಗಿ ಚರ್ಚಿಸಿ, ಸರ್ಕಾರದ ಆದೇಶದಂತೆ ಕ್ರಮವಹಿಸಿಕೊಳ್ಳಬೇಕೆಂದು ತೀರ್ಮಾನಿಸಲಾಯಿತು. |
| 15. | ಸ್ನಾತಕೋತ್ತರ ಸಂಸ್ಕೃತ ಪದವಿಯ 1ನೇ ಸೆಮಿಸ್ಟರ್ ಪೇಪರ-5ಗೆ ಈ ಮೊದಲು ನಿಗದಿಪಡಿಸಿದ್ದ ಪತಂಜಲಿ ಯೋಗ ದರ್ಶನದ ಬದಲು ಶಿವಸಂಹಿತೆಯ 1–5 ಪಟಲದವರೆಗಿನ ಪಠ್ಯಕ್ರಮವನ್ನು ಅಂಶಿಕ ಪರಿಷ್ಕರಣೆಯನ್ನು 2017–18 ನೇ ಸಾಲಿನಿಂದ ಅನ್ವಯವಾಗುವಂತೆ (ಬದಲಾವಣೆ) ಮಾಡಿದ ಕಲಾ ನಿಖಾಯ ಸಭೆಯ ಶಿಫಾರಸ್ಸನ್ನು ಪರಿಶೀಲಿಸುವ ಕುರಿತು. | Academic (S&T) | ಸ್ನಾತಕೋತ್ತರ ಸಂಸ್ಕೃತ ಪದವಿಯ 1ನೇ ಸೆಮಿಸ್ಟರ್ ಪೇಪರ-5ಗೆ ಈ ಮೊದಲು ನಿಗದಿಪಡಿಸಿದ್ದ ಪತಂಜಲಿ ಯೋಗ ದರ್ಶನದ ಬದಲು ಶಿವಸಂಹಿತೆಯ 1–5 ಪಟಲದವರೆಗಿನ ಪಠ್ಯಕ್ರಮವನ್ನು ಅಂಶಿಕ ಪರಿಷ್ಕರಣೆಯನ್ನು 2017–18 ನೇ ಸಾಲಿನಿಂದ ಅನ್ವಯವಾಗುವಂತೆ (ಬದಲಾವಣೆ) ಮಾಡಿದ ಕಲಾ ನಿಖಾಯ ಸಭೆಯ ಶಿಫಾರಸ್ಸನ್ನು ವಿದ್ಯಾವಿಷಯಕ್ ಪರಿಷತ್ ಒಪ್ಪಿತು. |
| 16. | ಪ್ರಾಕೃತ ಭಾಷೆಯ ಅಧ್ಯಯನ ಹಾಗೂ ಪ್ರಾಕೃತ ಸಾಹಿತ್ಯದ ಅಧ್ಯಯನದ ಭಾಗವನ್ನು ಸಂಸ್ಕೃತ ವಿಭಾಗಕ್ಕೆ ಮರಳಿ ಪಡೆದು ಅದಕ್ಕೆ ಸಂಬಂಧಿಸಿದ ವಿಷಯವನ್ನು ಸದ್ಯದ ಮಟ್ಟಿಗೆ ಈಗ ಯಥಾಸ್ಥಿತಿ (Status-quo) ಯಲ್ಲಿ ಮುಂದುವರೆಸುವಂತೆ ಕಲಾ ನಿಖಾಯ ಸಭೆಯ ಮಾಡಿರುವ ಶಿಫಾರಸ್ಸನ್ನು ಪರಿಶಿಲಿಸುವ ಕುರಿತು. | Academic (S&T) | ಪ್ರಾಕೃತ ಭಾಷೆಯ ಅಧ್ಯಯನ ಹಾಗೂ ಪ್ರಾಕೃತ ಸಾಹಿತ್ಯದ ಅಧ್ಯಯನದ ಭಾಗವನ್ನು ಸಂಸ್ಕೃತ ಅಧ್ಯಯನ ವಿಭಾಗಕ್ಕೆ ವಿಲೀನಗೊಳಿಸುವವರೆಗೆ ಸದರಿ ವಿಷಯದಲ್ಲಿ ಯಥಾಸ್ಥಿತಿ (Status-quo) ಯನ್ನು ಕಾಯ್ದುಕೊಳ್ಳಬೇಕೆಂದು ವಿದ್ಯಾವಿಷಯಕ ಪರಿಷತ್ ತೀರ್ಮಾನಿಸಿತು. |
| 17. | ಈಗ ಇರುವ ಸಂಸ್ಕೃತ ವಿಭಾಗವನ್ನು ಇನ್ನು ಮುಂದೆ ಸಂಸ್ಕೃತ, ಪ್ರಾಕೃತ ಹಾಗೂ ಯೋಗ ವಿಭಾಗವೆಂದು ಬದಲಿಸಲು ಕಲಾ ನಿಖಾಯ ಸಭೆಯು ಮಾಡಿದ ಶಿಫಾರಸ್ಸನ್ನು ಪರಿಶೀಲಿಸುವ ಕುರಿತು. | Academic (S&T) | ಸದ್ಯ ಇರುವ ಸಂಸ್ಕೃತ ವಿಭಾಗವನ್ನು ಇನ್ನು ಮುಂದೆ ಸಂಸ್ಕೃತ, ಪ್ರಾಕೃತ ಹಾಗೂ ಯೋಗ ವಿಭಾಗವೆಂದು ಬದಲಿಸಲು ಒಪ್ಪಿಗೆ ಸೂಚಿಸಿದ ಕಲಾ ನಿಖಾಯದ ಶಿಫಾರಸ್ಸನ್ನು ವಿದ್ಯಾವಿಷಯಕ ಪರಿಷತ್ ಒಪ್ಪಲಾಗಲಿಲ್ಲ. |
| 18. | ಸಂಸ್ಕೃತದ ಮೂಲ ಪಠ್ಯಪುಸ್ತಕಗಳನ್ನು ಸಂಸ್ಕೃತ ಬಲ್ಲವರು ಕಲಿಸಬೇಕಾಗಿರುವುದರಿಂದ ಯೋಗ ವಿಭಾಗವನ್ನು ಸಂಸ್ಕೃತ ವಿಭಾಗದಲ್ಲಿ ವಿಲೀನಗೊಳಿಸಲು ಕಲಾ ನಿಖಾಯ ಸಭೆಯು ಮಾಡಿದ ಶಿಫಾರಸ್ಸನ್ನು ಪರಿಶೀಲಿಸುವ ಕುರಿತು. | Academic (S&T) | ಯೋಗ ವಿಷಯದ ಪಠ್ಯಪುಸ್ತಕಗಳು ಹೆಚ್ಚಾಗಿ ಸಂಸ್ಕೃತದಲ್ಲಿರುವುದರಿಂದ ಯೋಗ ವಿಭಾಗವನ್ನು ಸಂಸ್ಕೃತ ವಿಭಾಗದಲ್ಲಿ ವಿಲೀನಗೊಳಿಸಲು ಒಪ್ಪಿದ ಕಲಾ ನಿಖಾಯದ ಶಿಫಾರಸ್ಸನ್ನು ವಿದ್ಯಾವಿಷಯಕ ಪರಿಷತ್ ಒಪ್ಪಲಾಗಲಿಲ್ಲ. |



Scanned with Oken Scanner